**ಶ್ರೀ ಎ.ಮಂಜು:** ಮಾನ್ಯ ಸಚಿವರು ದಿ:11.06.2007ರಲ್ಲಿ ಅನುಮೋದನೆ ನೀಡಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, 2007–2008ರಲ್ಲಿ ಇವರು ಏಕೆ ಕೆಲಸ ಮಾಡಲಿಲ್ಲ? ಈಗ ಅವರು ಮತ್ತೊಮ್ಮೆ 2009–10ರ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಬಜೆಟ್‌ನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದರೆ, ಉದ್ಭವಿಸುವುದಿಲ್ಲವೆನ್ನುವ ಉತ್ತರ ಕೊಟ್ಟಿದ್ದಾರೆ. 2010ರಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ ಮೇಲೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟರೆ ಹೇಗೆ? ಈ ಬಗ್ಗೆ ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕಾಗುತ್ತದೆ. ನಮ್ಮಲ್ಲಿ ರುದ್ರಪಟ್ಟಣ ಎನ್ನುವ ಗ್ರಾಮವಿದೆ. ಆ ಗ್ರಾಮ ಇಡೀ ಪ್ರಪಂಚದಲ್ಲಿಯೇ ಸಂಗೀತಕ್ಕೆ ಹೆಸರುವಾಸಿಯಾಗಿದೆ. ಇದರಲ್ಲಿ ತಾವು ತಾರತಮ್ಯ ಮಾಡಬಾರದು. ಇದರಲ್ಲೇನಾಗಿದೆ ಎಂದರೆ, ಹಾಸನ ಎನ್ನುವುದು ನಿಮ್ಮ ಕಣ್ಣಿಗೆ ಬಿದ್ದಿದೆ. ಅದನ್ನು ಬಿಟ್ಟು ಈಚೆಗೆ ಬನ್ನಿ. ನಾವೆಲ್ಲ ನಂಜುಂಡಪ್ಪ ವರದಿಯನ್ನು ಜಾರಿಗೆ ತರಬೇಕೆಂದು ಹೇಳುತ್ತಲೇ ಇದ್ದೇವೆ. ನಂಜುಂಡಪ್ಪನವರ ವರದಿಯನ್ನು ಹೀಗೆ ಮಾಡಿದ್ದಾರೆ ಎಂದರೆ ಪಾಪ ನಂಜುಂಡಪ್ಪನವರಿಗೆ ತೊಂದರೆಯಾಗಿ ಬಿಡುತ್ತದೆಯೋ ಏನೋ? ಅವರ ಹೆಸರು ಹೇಳಿ ಈ ರೀತಿ ಮಾಡುವುದು ಬೇಡ. ಹಾಸನ ಎನ್ನುವುದರ ಬಗ್ಗೆ ನಿಮ್ಮ ಮನಸ್ಸಿನಲ್ಲಿರುವುದನ್ನು ತೆಗೆದು ಹಾಕಿ ನೀವೇನು 2009–10ರಲ್ಲಿ ಕಾಮಗಾರಿಯನ್ನು ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ, ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:** ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣ ಗ್ರಾಮ ಆರ್.ಕೆ. ಶ್ರೀಕಂಠನ್, ಸಂಗೀತಗಾರರ ವಿಶೇಷವಾದ ಒಂದು ಊರಾಗಿದೆ. ನಿಜ, ದಿ:11.06.2007ರಲ್ಲಿ ವಿದ್ಯುತ್ ಸ್ಥಾವರ ಸ್ಥಾಪನೆ ಮಾಡಲು ತಾಂತ್ರಿಕ ಸಲಹಾ ಸಮಿತಿಯಿಂದ ಅನುಮೋದನೆ ದೊರಕಿತ್ತು. ಆದರೆ, ಬಜೆಟ್ ಇಟ್ಟಿರಲಿಲ್ಲ. ಈಗ ನಾವು ಬಜೆಟ್ ಇಡುತ್ತಿದ್ದೇವೆ. 18 ತಿಂಗಳುಗಳಲ್ಲಿ ನಾವು ಈ ಕಾಮಗಾರಿಯನ್ನು ಮುಗಿಸಿಕೊಡುತ್ತೇವೆ.

**ಕಾಪು ಕ್ಷೇತ್ರ ವ್ಯಾಪ್ತಿಯಲ್ಲಿ ತರಬೇತಿ ಕೇಂದ್ರ ತೆರೆಯುವ ಬಗ್ಗೆ.**

**36 (314) ಶ್ರೀ ಲಾಲಾಜಿ ಆರ್. ಮೆಂಡನ್ [ಕಾಪು]**

**ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)**

ಅ) ಕಾಪು ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರ ಹಾಗೂ ಖಾಸಗಿ ಡಿಪ್ಲೋಮಾ[ತಾಂತ್ರಿಕ] ತರಬೇತಿ ಕೇಂದ್ರ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹೌದಾದಲ್ಲಿ, ಸರ್ಕಾರಿ ಡಿಪ್ಲೋಮಾ (ತಾಂತ್ರಿಕ) ತರಬೇತಿ (ಮೆಕ್ಯಾನಿಕಲ್, ಎಲೆಕ್ಟ್ರಿಕಲ್ಸ್, ಎಲೆಕ್ಟ್ರಾನಿಕ್ಸ್ ವಿಷಯಗಳ ತರಬೇತಿ) ಕೇಂದ್ರದ ಮಂಜೂರಾತಿ ನೀಡುವುದೇ?

2008–09ನೇ ಸಾಲಿನಿಂದ ಕಾಪು ಸಮೀಪದ ಸ್ಥಳಗಳಾದ ಕಾರ್ಕಳದಲ್ಲಿ ಮಹಿಳಾ ಪಾಲಿಟೆಕ್ನಿಕ್, ಉಡುಪಿ ಮತ್ತು ಬಂಟ್ವಾಳದಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಲಾಗಿದೆ.

**ಶ್ರೀ ಲಾಲಾಜಿ ಆರ್.ಮೆಂಡನ್:** ಕಾಪು ಕ್ಷೇತ್ರದ ವ್ಯಾಪ್ತಿಯಲ್ಲಿ ಎರಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಎರಡು ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಿವೆ. ಆದರೆ, ತಾಂತ್ರಿಕ ಶಿಕ್ಷಣಕ್ಕೆ ನಮ್ಮಲ್ಲಿ ಸರಿಯಾದ ಕಾಲೇಜು ಇಲ್ಲ. ಈಗಾಗಲೇ ITI ಇದ್ದರೂ ಕೂಡ ಅಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಅದಕ್ಕಾಗಿ ಈಗಾಗಲೆ ಕಾಪು ಕ್ಷೇತ್ರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಳಾಂತರಗೊಳ್ಳುವುದಕ್ಕೆ ತಯಾರಾಗಿದೆ. ಹಾಗಾಗಿ, ಆ ಕಟ್ಟಡಕ್ಕೆ Polytechnic college ಅನ್ನು ಸನ್ಮಾನ್ಯ ಸಚಿವರು ಮಂಜೂರಾತಿ ಮಾಡಬೇಕು ಹಾಗೂ ಆ ಭಾಗದಲ್ಲಿ ಸುಜಲಾನ್ ಎಂಬ ಗಾಳಿಯಂತ್ರ ಘಟಕದ ಕೈಗಾರಿಕೆ ಬರುತ್ತಿದೆ. ಅದಕ್ಕಾಗಿ ITI ಮತ್ತು ಇತರ ತಾಂತ್ರಿಕ ಶಿಕ್ಷಣಕ್ಕೆ ಸಾಕಷ್ಟು ಪ್ರೋತ್ಸಾಹವಿದೆ. ಅದಕ್ಕಾಗಿ ಆ ಕಾಲೇಜಿಗೆ ಮಂಜೂರಾತಿ ನೀಡಬೇಕಾಗಿ ಸನ್ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳುತ್ತಿದ್ದೇನೆ.

**ಶ್ರೀ ಅರವಿಂದ ಲಿಂಬಾವಳಿ:** ಈಗಾಗಲೆ ಉಡುಪಿಯಲ್ಲಿ, ಬಂಟ್ವಾಳದಲ್ಲಿ ಮತ್ತು ಕಾರ್ಕಳದಲ್ಲಿ, ಮಂಗಳೂರಿನ K.P.T. and Women's Polytechnic ಇಷ್ಟೆ ಕಡೆಗೆ ಇದೆ. ಅಲ್ಲಿ ಸಾಕಷ್ಟು ವಿದ್ಯಾರ್ಥಿಗಳ need ಏನಿದೆ ಅದನ್ನು ಪೂರೈಸುವ ಮಟ್ಟಕ್ಕೆ polytechnic colleges ಅನ್ನು ಅಲ್ಲಿ ತೆರೆದಿದ್ದೇವೆ. ಅದೂ ಮೀರಿ, ಆಕಸ್ಮಾತ್ ಅಲ್ಲೇನಾದರೂ ಅವಶ್ಯಕತೆ ಇದೆ ಎಂಬ demand ಬಂದರೆ, ನಿಶ್ಚಿತವಾಗಿ ಅವರು ಹೇಳುವ ಸಲಹೆಯನ್ನು consider ಮಾಡಲಾಗುತ್ತದೆ. ಆದರೆ, ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಇದನ್ನು ಮಾಡುವಂಥ ಯಾವುದೇ ಯೋಜನೆ ಸರ್ಕಾರದ ಮುಂದಿಲ್ಲ.

## ಕುಡಿಯುವ ನೀರಿನ ಯೋಜನೆ ಬಗ್ಗೆ

**307 (109) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ),**
**ಶ್ರೀಮತಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**